
5chaptee
అధ్యాయం-ఐదు

# ಅಧ್ಯಾಯ : ಐದು

# ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಸಂಸ್ಥೆಗಳು

ಕರ್ನಾಟಕ ಶಿಕ್ಷಣ ರಂಗದ ಜೀವನಾಡಿ ಎನಿಸಿರುವ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯ ಸ್ಥಾಪನೆಯ ಹಿನ್ನಲೆ ರೋಮಾಂಚನಕಾರಿಯಾಗಿದೆ. ಅದು ಒಂದು ಜನಾಂಗದ ಸೇವಾಭಾವ ಹಾಗೂ ಸಾಹಸಗಳ ವೃತ್ತಾಂತವಾಗಿದೆ. ತ್ಯಾಗಿಗಳ ಬೆವರಿನ ಕಥೆಯಾಗಿದೆ. ಋಷಿಸದೃಶ್ಯ ಜೀವನ ನಡೆಸಿದ ಏಳು ಜನ ಸಂಸ್ಥಾಪಕ ಅಜೀವ ಸದಸ್ಯರು ಶಿಕ್ಷಣ ಪ್ರಸಾರಕ್ಕಾಗಿ ಮಾಡಿದ ಹೋರಾಟದ ಹೃದ್ಯ ಚಿತ್ರಣವಾಗಿದೆ. ಸಂಸ್ಥೆಯು ದೇಶ-ವಿದೇಶದಲ್ಲಿಯೂ ಹಲವಾರು ಶೈಕ್ಷಣಿಕ ಸಾಧನೆಯ ಮೈಲಿಗಲ್ಲನ್ನು ಮುಟ್ಟಿದೆ ಎಂದು ಹೇಳಬಹುದು.

ಭಾರತದ ಶೈಕ್ಷಣಿಕ ಚರಿತ್ರೆಯಲ್ಲಿ ೧೯೧೬ನೇ ಇಸವಿ ಅತ್ಯಂತ ಮಹತ್ವದ ವರ್ಷ. ಕಲಕತ್ತಾ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಆಶುತೋಷ ಮುಖರ್ಜಿ ಹೆಸರಾಂತ ವ್ಯಕ್ತಿಯೆನಿಸಿದ್ದರು. ಅವರು ೧೯೧೬ ರಲ್ಲಿ ಈ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳನ್ನು ಪ್ರಾರಂಭಿಸಿದರು. ಪಂಡಿತ ಮದನಮೋಹನ ಮಾಳವೀಯ ಅವರು ಬನಾರಸ ಹಿಂದು ವಿಶ್ವವಿದ್ಯಾಲಯ ಸ್ಥಾಪಿಸಿದರು. ಆಚಾರ್ಯ ಡಿ.ಕೆ. ಕರ್ವೆ ಪುಣೆಯ ಸಮೀಪ ಎಸ್.ಎನ್.ಡಿ. ಟಿ. ಹೆಸರಿನಲ್ಲಿ ಮಹಿಳಾ ವಿಶ್ವವಿದ್ಯಾಲಯ ಪ್ರಾರಂಭಿಸಿದರು. ಸರ್. ಎಂ. ವಿಶ್ವೇಶ್ವರಯ್ಯನವರು ಮೈಸೂರಿನಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರಾರಂಭವಾಗಲು ಕಾರಣಪುರುಷರೆನಿಸಿದರು. ಬೆಳಗಾವಿಯಲ್ಲಿ ಏಳು ಜನ ಪದವೀಧರ ಯುವಕರು ಉದಾತ್ತ ಧ್ಯೇಯವನ್ನಿಟ್ಟುಕೊಂಡು ರಾ.ಬ.ಅರಟಾಳ ರುದ್ರಗೌಡರ ನೇತೃತ್ವದಲ್ಲಿ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯನ್ನು ಸ್ಥಾಪಿಸುವ ನಿರ್ಧಾರ ಮಾಡಿದರು. ೧೯೧೬ ರಲ್ಲಿ ಶಿ.ಶಿ. ಬಸವನಾಳರು ಎಂ.ಎ. ಪದವೀಧರರಾಗಿ ಬಂದ ಮೇಲೆ ಶಿಕ್ಷಣ ಸಂಸ್ಥೆ ಸ್ಥಾಪಿಸುವ ಕುರಿತು ಶ್ರೀ ಪಂಡಿತಪ್ಪ ಚಿಕ್ಕೋಡಿ, ಶ್ರೀ ಬಿ.ಬಿ. ಮಮದಾಪುರ ಮತ್ತು ಶ್ರೀ ಎಂ.ಆರ್. ಸಾಖರೆಯವರೊಂದಿಗೆ ಆಲೋಚಿಸಿದರು. ಕೂಡಲೇ ಶ್ರೀ ಪಂಡಿತಪ್ಪನವರ ಹಿರಿತನದಲ್ಲಿ ಬೆಳಗಾವಿಯಲ್ಲಿ ಒಮದು ಸಮಾಲೋಚನಾ ಸಭೆಯನ್ನು ಕರೆಯಲಾಯಿತು. ಈ ಯುವಕರು ರಾ.ಬ. ಅರಟಾಳ ರುದ್ರಗೌಡರನ್ನು ಭೇಟಿಯಾಗಿ ತಮ್ಮ ಮನೋಗತವನ್ನು ಪ್ರಸ್ತಾಪಿಸಿದರು. ಅರಟಾಳರು ಈ ಯುವಕರ ನಿರ್ಧಾರ ಎಷ್ಟೊಂದು ದೃಢವಾಗಿದೆ ಎಂಬುದನ್ನು ಪರೀಕ್ಷಿಸತೊಡಗಿದರು. ಆಗ ಎಚ್.ಎಫ್. ಕಟ್ಟೀಮನಿಯವರು ಅರಟಾಳ ರುದ್ರಗೌಡರಿಗೆ ಹೇಳಿದ ಮಾತು ಮನನೀಯವಾಗಿದೆ.

“ಇವರೆಲ್ಲ ಮಿತ್ರರು ಸರಕಾರಿ ನೌಕರಿ ಸೇರಲಿ. ನಾನೊಬ್ಬನೇ ನಿಮ್ಮ ಕುದುರೆ ಕಟ್ಟುವ ಸ್ಥಳದಲ್ಲಿ ಮೂರು ಇಯತ್ತೆಯ ಎ.ವ್ಹಿ. ಸ್ಕೂಲನ್ನು ಒಂದು ವರ್ಷ ನಡೆಸುತ್ತೇನೆ. ಆಮೇಲೆ ಬಂದು ಮಾಡಿ ಲಿಂಗವಂತ ಹಿರಿಯರು ನಮಗೆ ಯಾರೂ ಸಹಾಯ ಮಾಡಲಿಲ್ಲ ಎಂದು ಹೇಳುತ್ತಾ ಹೋಗುತ್ತೇನೆ.” ಎಂದರು.

ಈ ಮಾತು ಕೇಳಿ ಅತೀವ ಸಂತೋಷಭರಿತರಾದ ಅರಟಾಳ ರುದ್ರಗೌಡರು ಸಪ್ತರ್ಷಿಗಳನ್ನು ಆಶೀರ್ವದಿಸಿ ಎಲ್ಲ ರೀತಿಯ ಬೆಂಬಲ ದೊರಕಿಸಿ ಕೊಡುವ ಭರವಸೆ ಇತ್ತರು. ಶ್ರೀ ಬಸವನಾಳರೊಂದಿಗೆ ಸರ್ವಶ್ರೀ ಪಿ.ಆರ್.ಚಿಕ್ಕೋಡಿ, ಮಮದಾಪುರ, ಎಮ್. ಆರ್. ಸಾಖರೆ, ಬಿ.ಎಸ್. ಹಂಚಿನಾಳ, ಎಚ್.ಎಫ್, ಕಟ್ಟಿಮನಿ ಮತ್ತು ಬಿ.ಎಲ್. ಪಾಟೀಲ ಹೀಗೆ ಒಟ್ಟು ಏಳು ಜನರು ಸಭೆಯಲ್ಲಿ ಕೂಡಿದರು. ಎಲ್ಲರೂ ಒಕ್ಕಟ್ಟಿನಿಂದ ಒಂದು ಶಿಕ್ಷಣ ಸಂಸ್ಥೆ ಸ್ಥಾಪಿಸುವ ನಿರ್ಧಾರ ಮಾಡಿದರು. ಸಂಸ್ಥೆಯು ಡೆಕ್ಕನ್ ಎಜ್ಯುಕೇಷನ್ ಸೊಸೈಟಿಯ ಮಾದರಿಯಂತೆ ಇರಬೇಕೆಂದು ನಿರ್ಧರಿಸಿದರು. ಆಗ ಶ್ರೀ ಬಿ.ಎಲ್. ಪಾಟೀಲರು ತಮ್ಮ ಮನೆತನದ ತೊಂದರೆಗಳ ಕಾರಣ ಧಾರವಾಡವನ್ನು ಬಿಟ್ಟು ಬರಲು ಸಾಧ್ಯವಾಗದಿದ್ದುದರಿಂದ ಈ ಸಂಘಟನೆಯಿಂದ ದೂರ ಉಳಿದರು. ಸಮಾಜದ ಹಿರಿಯರೊಂದಿಗೆ ಪತ್ರ ವ್ಯವಹಾರ ನಡೆಸಲು ಶ್ರೀ ಎಮ್. ಆರ್. ಸಾಖರೆಯವರನ್ನು ಸೆಕ್ರೆಟರಿ ಎಂದು ನೇಮಿಸಲಾಯಿತು.

ಇದಾದ ಮೇಲೆ ಹೈಸ್ಕೂಲನ್ನು ಯಾವ ಊರಿನಲ್ಲಿ ಪ್ರಾರಂಭಿಸಬೇಕು ಎನ್ನುವ ಬಗ್ಗೆ ಸಮಾಲೋಚಿಸಿದರು. ಕೆಲವರು ಧಾರವಾಡದಲ್ಲಿ ಆರಂಭಿಸಲು ಆಗ್ರಹಿಸಿದರು. ಅಲ್ಲಿ ಆಗಲೇ ‘ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ’ ಸ್ಥಾಪನೆಗೊಂಡಿತ್ತು. ಬೇರೆ ಕೆಲವರು ವಿಜಾಪುರ, ಬಾಗಲಕೋಟೆ, ಶಿವಯೋಗ ಮಂದಿರ ಮೊದಲಾದ ಸ್ಥಳಗಳನ್ನು ಸೂಚಿಸಿದರು. ಈ ಗೊಂದಲವನ್ನು ಪರಿಹರಿಸುವ ಉದ್ದೇಶದಿಂದ ಬಸವನಾಳರು ಮತ್ತು ಇನ್ನುಳಿದವರು ಎರಡನೆಯ ಸಭೆಯನ್ನು ಬೆಳಗಾವಿಯ ಕಲ್ಮಠದಲ್ಲಿ ನಡೆಸಿದರು. ಅಲ್ಲಿ ಎಲ್ಲರ ಅಭಿಪ್ರಾಯಗಳನ್ನು ಪರಿಶೀಲಿಸಿ, ಅಂತಿಮವಾಗಿ ಬೆಳಗಾವಿಯಲ್ಲಿಯೇ ಶಾಲೆ ಸ್ಥಾಪಿಸುವ ನಿರ್ಧಾರ ಮಾಡಿದರು.

ಮೇಲಿನ ನಿರ್ಧಾರ ಚಾರಿತ್ರಿಕ ದೃಷ್ಟಿಯಿಂದ ತುಂಬಾ ಮಹತ್ವದ್ದಾಯಿತು. ಆಗ ಬೆಳಗಾವಿ ಕಮೀಶನರರ ಕೇಂದ್ರ ಸ್ಥಳವಾಗಿತ್ತು. ಸಮಾಜದ ಮುಖಂಡರಾಗಿದ್ದ ರಾ.ಬ. ಅರಟಾಳ ರುದ್ರಗೌಡರು ಅಲ್ಲಿಯೇ ವಾಸವಾಗಿದ್ದರು. ಅಲ್ಲಿ ಕನ್ನಡಿಗರ ವರ್ಚಸ್ಸು ಸರಿಯಾಗಿ ಇರಲಿಲ್ಲ. ಮರಾಠಿಗರ ಪ್ರಾಭಲ್ಯವೇ ಹೆಚ್ಚಾಗಿತ್ತು. ಆದ್ದರಿಂದ ಬೆಳಗಾವಿಯಲ್ಲಿ ಕೆ.ಎಲ್.ಇ. ಶಿಕ್ಷಣ ಸಂಸ್ಥೆ ತೆರೆದು ಕನ್ನಡಿಗರ ಪ್ರಾಭಲ್ಯ ಬೆಳೆಸಬೇಕೆಂಬ ತೀರ್ಮಾನವನ್ನು ಸದಸ್ಯರು ಕೈಗೊಂಡರು.

ಹೀಗೆ ಸಂಸ್ಥೆಯನ್ನು ಕಟ್ಟಿ ಸಂಸ್ಥೆಯನ್ನು ಹಲವು ರೀತಿಯಲ್ಲಿ ದುಡಿಸಿದ ಶ್ರೇಯಸ್ಸು ಈ ಸಪ್ತರ್ಷಿಗಳಿಗೆ ಸಲ್ಲುತ್ತದೆ. 'ಆಡುಮುಟ್ಟದ ಸೊಪ್ಪಿಲ್ಲ' ಎಂಬ ಸರ್ವಜ್ಞನ ವಚನವನ್ನು ಅಕ್ಷರಶಃ ಸತ್ಯವಾಗಿಸಿಕೊಂಡು ಕೆ.ಎಲ್.ಇ. ಸಂಸ್ಥೆಯು ಮುನ್ನಡೆದು, 'ಕೆ.ಎಲ್.ಇ. ಸಂಸ್ಥೆ ತೆರೆಯದ ಶಾಲೆಯಿಲ್ಲ' ಎಂಬಂತೆ ಸಾಬೀತುಪಸಿರುವುದನ್ನು ನಾವು ನೋಡಬಹುದಾಗಿದೆ. ಏಕೆಂದರೆ ೯ ತಿಂಗಳಿನ ಹಸುಳೆಯಿಂದ ಹಿಡಿದು ಶಿಕ್ಷಣ ಪ್ರಾರಂಭಿಸಿದ ಸಂಸ್ಥೆಯ ವಿವಿಧ ಶಾಲೆ-ಕಾಲೇಜುಗಳನ್ನು ಗುರುತಿಸಬಹುದಾಗಿದೆ. ಪೂರ್ವಪ್ರಾಥಮಿಕ ಶಾಲೆಗಳಿಂದ ಹಿಡಿದು, ಮಾಧ್ಯಮಿಕ ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ವೈದ್ಯಕೀಯ, ತಾಂತ್ರಿಕ, ಆರೋಗ್ಯ, ಕಾನೂನು, ಶಿಕ್ಷಣ ಮಹಾವಿದ್ಯಾಲಯಗಳು, ಅಷ್ಟೇ ಅಲ್ಲದೇ ಶೈಕ್ಷಣಿಕವಾಗಿ ಬೇಕಾದ ಎಲ್ಲ ಜ್ಞಾನವನ್ನು ನೀಗಿಸುವ ಜ್ಞಾನದಾಸೋಹವಾಗಿದೆ.

**ಬ್ಯಾನಿಯನ್ ಶಾಲೆ**

ಹಲವಾರು ಸಂಶೋಧನೆಗಳ ಪ್ರಕಾರ ಮಗುವಿನ ಕಲಿಕೆ ಮತ್ತು ಬೌದ್ಧಿಕ ಬೆಳವಣಿಗೆಗೆ ಮಗುವಿನ ಸುತ್ತಮುತ್ತಲಿನ ಪರಿಸರ ಹಾಗೂ ಆರೋಗ್ಯಪೂರ್ಣ ಸುಂದರವಾದ ವಾತಾವರಣ ಕಾರಣವಾಗುತ್ತಿದೆ. ಪ್ರಾರಂಭದಲ್ಲಿಯೇ ಮಗುವಿಗೆ ಅದರ ಆಸಕ್ತಿಯ ನೆಲೆಗಳಲ್ಲಿ ಆಟದೊಂದಿಗೆ ಪಾಠವನ್ನು ನೀಡುತ್ತ ಬಂದರೆ ಅದು ಅವರ ಭವಿಷ್ಯತ್ತಿನ ಬದುಕಿಗೆ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾಗುತ್ತದೆ. ಈ ಎಲ್ಲ ಆಲೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಮೇರಿಕೆಯ ಫ್ಲೋರಿಡಾದಲ್ಲಿರುವ ಮಕ್ಕಳ ಬೆಳವಣಿಗೆ ಮತ್ತು ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ 'ಮೆಗಲಿಯನ್ ಅಕೆಡೆಮಿ' ಈ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಪ್ರಾಥಮಿಕ ಪೂರ್ವ ಶಿಕ್ಷಣದ ಪರಿಸರದಲ್ಲಿ ಹಲವಾರು ಹೊಸ ಹೊಸ ಸಂಶೋಧನೆಗಳಲ್ಲಿ ತೊಡಗಿರುವ ಈ ಅಕಾಡೆಮಿ ಅಮೇರಿಕೆಯಲ್ಲಿ ಇಂಥ ಹಲವಾರು ಶಾಲೆಗಳನ್ನು ಪ್ರಾರಂಭಿಸಿ ಅದರಲ್ಲಿ ಯಶಸ್ವಿಯನ್ನು ಪಡೆದಿದೆ.

ಈ ಶಾಲೆಯಲ್ಲಿ ಒಂಬತ್ತು ತಿಂಗಳ ಮಗುವಿನಿಂದ ನಾಲ್ಕೂವರೆ ವರ್ಷಗಳ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದ್ದು ಇದರಲ್ಲಿ ಅವರವರ ವಯಸ್ಸಿಗನುಗುಣವಾಗಿ ನಾಲ್ಕು ಭಾಗಗಳನ್ನಾಗಿ ವಿಭಜಿಸಲಾಗಿದೆ. ಒಂಬತ್ತು ತಿಂಗಳಿಂದ ಒಂದೂವರೆ ವರ್ಷದ ಒಂದು ವರ್ಗ, ಒಂದೂವರೆ ವರ್ಷದಿಂದ ಎರಡೂವರೆ ವರ್ಷದವರೆಗಿನ ಒಂದು ವರ್ಗ, ಎರಡೂವರೆ ವರ್ಷಗಳಿಂದ ಮೂರುವರೆ ವರ್ಷದವರೆಗಿನ ಒಂದು ವರ್ಗ, ಮೂರುವರೆ ವರ್ಷದಿಂದ ನಾಲ್ಕೂವರೆ ವರ್ಷದವರೆಗಿನ ವರ್ಗಗಳನ್ನಾಗಿ ವಿಂಗಡಿಸಿದ್ದು ಆಯಾ ವಯಸ್ಸಿಗೆ ಬಂದ ತಕ್ಷಣ ಮಗು

ವಯಸ್ಸಿಗನುಗುಣವಾಗಿ ಆ ವರ್ಗದಲ್ಲಿ ಕಲಿಯುತ್ತ ಮಗು ಮುಂದೆ ಹೋಗುತ್ತದೆ. ಇಲ್ಲಿ ಮಕ್ಕಳ ಬೆಳಗಿನಿಂದ ಸಂಜೆಯವರೆಗೂ ಯೋಗಕ್ಷೇಮವನ್ನು ನೋಡಿಕೊಳ್ಳಲಾಗುತ್ತದೆ.

**ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು**

| | | |
|---|---|---|
| ೧. | ಬಿ.ಎಸ್.ಹಂಚಿನಾಳ ಕನ್ನಡ ಪ್ರಾಥಮಿಕ ಶಾಲೆ, ಬೆಳಗಾವಿ | ೧೯೪೩ |
| ೨. | ಕಿಂಡರ್ ಗಾರ್ಡನ್, ಬೆಳಗಾವಿ | ೧೯೬೦ |
| ೩. | ಪ್ರಾಕ್ಟೀಸಿಂಗ್ ಸ್ಕೂಲ್, ಅಂಕೋಲಾ | ೧೯೭೦ |
| ೪. | ಹೆಚ್.ಎಫ್.ಕಟ್ಟೀಮನಿ ಕನ್ನಡ ಪ್ರಾಥಮಿಕ ಶಾಲೆ, ಹುಬ್ಬಳ್ಳಿ | ೧೯೮೩ |
| ೫. | ಕಿಂಡರ್ ಗಾರ್ಡನ್, ಅಂಕೋಲಾ | ೧೯೮೯ |
| ೬. | ನರ್ಸರಿ ಅಂಡ ಪ್ರಾಥಮಿಕ ಶಾಲೆ, ಮಾಲೂರು | ೧೯೮೯ |
| ೭. | ಸಿಲ್ವರ್ ಜ್ಯುಬಲಿ ಪ್ರೈಮರಿ ಸ್ಕೂಲ್, ಬಾರ್ಸಿ | ೧೯೯೦ |
| ೮. | ಸಿಲ್ವರ್ ಜ್ಯುಬಲಿ ಕಿಂಡರ್‌ಗಾರ್ಡನ್, ಬಾರ್ಸಿ | ೧೯೯೦ |
| ೯. | ಬಾಲ ಸಂಸ್ಕಾರ ಕೇಂದ್ರ, ಅಕ್ಕಲಕೋಟ | ೧೯೯೨ |
| ೧೦. | ಕನ್ನಡ ಕಾನ್ವೆಂಟ ಪ್ರೈಮರಿ ಶಾಲೆ, ಹಾವೇರಿ | ೧೯೯೮ |
| ೧೧. | ಕನ್ನಡ ಕಾನ್ವೆಂಟ ಪ್ರೈಮರಿ ಶಾಲೆ, ಗದಗ | ೧೯೯೮ |
| ೧೨. | ಕನ್ನಡ ಕಾನ್ವೆಂಟ ಪ್ರೈಮರಿ ಶಾಲೆ, ಸವದತ್ತಿ | ೧೯೯೮ |
| ೧೩. | ಕನ್ನಡ ಕಾನ್ವೆಂಟ ಪ್ರೈಮರಿ ಶಾಲೆ, ಅಥಣಿ | ೧೯೯೮ |
| ೧೪. | ಕೆ.ಎಲ್.ಇ ಸಂಸ್ಥೆಯ ಇಂಟರ್‌ನ್ಯಾಷನಲ್ ಶಾಲೆ, ಬೆಂಗಳೂರು | ೨೦೦೨ |
| ೧೫. | ಕೆ.ಎಲ್.ಇ ಸಂಸ್ಥೆಯ ಇಂಗ್ಲೀಷ್ ಮಿಡಿಯಂ ಸ್ಕೂಲ್ ಜುಲೇ ಸೊಲ್ಲಾಪುರ | ೨೦೦೨ |
| ೧೬. | ಕೆ.ಎಲ್.ಇ ಸಂಸ್ಥೆಯ ಇಂಗ್ಲೀಷ್ ಮಿಡಿಯಂ ಸ್ಕೂಲ್ ಮಂಜುನಾಥನಗರ, ಹುಬ್ಬಳ್ಳಿ | ೨೦೦೨ |
| ೧೭. | ಕೆ.ಎಲ್.ಇ ಸಂಸ್ಥೆಯ ಕನ್ನಡ ಕಾನ್ವೆಂಟ್ ಪ್ರೈಮರಿ ಶಾಲೆ, ಗೋಕಾಕ | ೨೦೦೩ |

೧೮. ಕೆ.ಎಲ್.ಇ ಸಂಸ್ಥೆಯ ಸಾತಗೌಡ ಚನ್ನಗೌಡ ಪಾಟೀಲ ಕನ್ನಡ ಮಿಡಿಯಂ ಕಾನ್ವೆಂಟ್ ಶಾಲೆ, ಅಂಕಲಿ ೨೦೦೪

೧೯. ಕೆ.ಎಲ್.ಇ ಸಂಸ್ಥೆಯ ಡಾ.ದಯಾನಂದ ಹಿರೇಮಠ ಕನ್ನಡ ಮಿಡಿಯಂ ಕಾನ್ವೆಂಟ್ ಶಾಲೆ, ಕೆರೂರು ೨೦೦೪

೨೦. ಕೆ.ಎಲ್.ಇ ಸಂಸ್ಥೆಯ ಪ್ರೈಮರಿ ಶಾಲೆ, ಲಿಂಗರಾಜ ಕಾಲೇಜ ಆವರಣ, ಬೆಳಗಾವಿ ೨೦೦೪

೨೧. ಅಣ್ಣಪ್ಪ ಕಾಡಾದಿ ಹೈಸ್ಕೂಲ್, ಸೋಲ್ಲಾಪುರ (ಮಹಾರಾಷ್ಟ್ರ) ೧೯೩೭

೨೨. ಸಿಲ್ವರ್ ಜ್ಯೂಬಿಲಿ ಹೈಸ್ಕೂಲ್, ಬಾರ್ಸಿ(ಮಹಾರಾಷ್ಟ್ರ) ೧೯೪೧

೨೩. ಮಂಗ್ರುಳೆ ಹೈಸ್ಕೂಲ್, ಅಕ್ಕಲಕೋಟೆ (ಮಹಾರಾಷ್ಟ್ರ) ೧೯೫೩

೨೪. ಸಿ.ಎಸ್. ಕಿತ್ತೂರ ಹೈಸ್ಕೂಲ್, ಅಥಣಿ ೧೯೫೮

೨೫. ಸಿ.ಎಸ್.ಅಂಗಡಿ ಗರ್ಲ್ಸ ಹೈಸ್ಕೂಲ್, ಗೋಕಾಕ ೧೯೬೨

೨೬. ವಿ.ಕೆ.ಗರ್ಲ್ಸ ಹೈಸ್ಕೂಲ್, ಅಂಕೋಲಾ ೧೯೬೨

೨೭. ಕೆ.ಜಿ.ಅಂಡ್ ಇಂಗ್ಲಿಷ್ ಮಿಡಿಯಂ ಸ್ಕೂಲ್, ನಿಪ್ಪಾಣಿ ೧೯೬೭

೨೮. ಬಿ.ಬಿ.ಮಮದಾಪೂರ ಗರ್ಲ್ಸ ಹೈಸ್ಕೂಲ್, ಸವದತ್ತಿ ೧೯೭೦

೨೯. ಎಂಆರ್.ಸಾಖರೆ ಇಂಗ್ಲೀಷ್ ಮಿಡಿಯಂ ಸ್ಕೂಲ್, ಹುಬ್ಬಳ್ಳಿ ೧೯೭೪

೩೦. ಶ್ರೀಮತಿ ವಿ.ನಂಜಮ್ಮ ಹೈಸ್ಕೂಲ್, ಮಾಲೂರು ೧೯೮೧

೩೧. ಪಿ.ಆರ್.ಚಿಕ್ಕೊಡಿ ಸೆಕೆಂಡರಿ ಸ್ಕೂಲ್, ಗಳತಗಾ ೧೯೮೫

**ಪದವಿ ಪೂರ್ವ ಕಾಲೇಜು ಮತ್ತು ಪದವಿ ಮಹಾವಿದ್ಯಾಲಯಗಳು**

೧. ಜಿ.ಎ. ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ, ಬೆಳಗಾವಿ ೧೯೧೬

೨. ಆರ.ಎಲ್.ಎಸ್.ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ, ಧಾರವಾಡ ೧೯೨೨

೩. ಲಿಂಗರಾಜ ಪದವಿ ಪೂರ್ವ ಮಹಾವಿದ್ಯಾಲಯ, ಬೆಳಗಾವಿ ೧೯೩೩

| | | |
|---|---|---|
| ೪. | ಜಗದ್ಗುರು ಗಂಗಾಧರ ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೪೭ |
| ೫. | ಶ್ರೀ.ಕಾಡಸಿದ್ದೇಶ್ವರ ಕಲಾ ಮತ್ತು ಎಚ್.ಎಸ್.ಕೋತಂಬ್ರಿ ವಿಜ್ಞಾನ ಪ.ಪೂರ್ವ ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೫೨ |
| ೬. | ರಾಜಾ ಲಖಮಗೌಡ ಪದವಿ ಪೂರ್ವ ಮಹಾವಿದ್ಯಾಲಯ, ಬೆಳಗಾವಿ | ೧೯೫೩ |
| ೭. | ಪಿ.ಸಿ.ಜಾಬಿನ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ, ಬೆಳಗಾವಿ | ೧೯೫೭ |
| ೮. | ಜಗದ್ಗುರು ತೋಂಟದಾರ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯ, ಗದಗ | ೧೯೫೮ |
| ೯. | ಜಿ.ಐ.ಬಾಗೇವಾಡಿ ಕಲಾ ವಿಜ್ಞಾನ, ವಾಣಿಜ್ಯ ಪ.ಪೂರ್ವ ಮಹಾವಿದ್ಯಾಲಯ, ನಿಪ್ಪಾಣಿ | ೧೯೬೧ |
| ೧೦. | ಗುದ್ಲೆಪ್ಪ ಹಳ್ಳಿಕೇರಿ ಪ.ಪೂರ್ವ ಮಹಾವಿದ್ಯಾಲಯ, ಹಾವೇರಿ | ೧೯೬೩ |
| ೧೧. | ಎಸ್.ನಿಜಲಿಂಗಪ್ಪ ಪ.ಪೂರ್ವ ಮಹಾವಿದ್ಯಾಲಯ, ಬೆಂಗಳೂರು | ೧೯೬೩ |
| ೧೨. | ಎಸ್.ಕೆ.ಸಂಯುಕ್ತ ಪ.ಪೂ ಮಹಾವಿದ್ಯಾಲಯ, ಸವದತ್ತಿ | ೧೯೭೨ |
| ೧೩. | ಶ್ರೀ.ಶಿವಯೋಗಿ ಮುರಘೇಂದ್ರ ಸ್ವಾಮೀಜಿ ಕಲಾ, ವಾಣಿಜ್ಯ, ವಿಜ್ಞಾನ ಪ.ಪೂ.ಮಹಾವಿದ್ಯಾಲಯ, ಅಥಣಿ | ೧೯೬೮ |
| ೧೪. | ಬಸವ ಪ್ರಭು ಕೋರೆ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಪ.ಪೂ ಮಹಾವಿದ್ಯಾಲಯ, ಚಿಕ್ಕೋಡಿ | ೧೯೬೯ |
| ೧೫. | ಕೆ.ಎಲ್.ಇ ಸಂಸ್ಥೆಯ ಪ.ಪೂ ಕಾಲೇಜ್, ಗೋಕಾಕ | ೧೯೮೭ |
| ೧೬. | ಸ್ವತಂತ್ರ ಪದವಿಪೂರ್ವ ಮಹಾವಿದ್ಯಾಲಯ, ಬೆಂಗಳೂರು | ೧೯೯೬ |
| ೧೭. | ಪದವಿ ಪೂರ್ವ ಮಹಾವಿದ್ಯಾಲಯ, ಅಂಕೋಲಾ | ೧೯೯೯ |
| ೧೮. | ಪದವಿ ಪೂವ ವಿಜ್ಞಾನ ಮಹಾವಿದ್ಯಾಲಯ, ಗಂಗಾವತಿ | ೨೦೦೧ |
| ೧೯. | ಕೆ.ಎಲ್.ಇ. ಸಂಸ್ಥೆಯ ಪ.ಪೂ ಕಲೆ ಮತ್ತು ವಾಣಿಜ್ಯ ಕಾಲೇಜ್, ಸವದತ್ತಿ | ೨೦೦೩ |

| | | |
|---|---|---|
| ೨೦. | ಕೆ.ಎಲ್.ಇ. ಸಂಸ್ಥೆಯ ಪ.ಪೂ ಕಲೆ ಮತ್ತು ವಾಣಿಜ್ಯ ಕಾಲೇಜ್, ಖಾನಾಪುರ | ೨೦೦೪ |
| ೨೧. | ಕೆ.ಎಲ್.ಇ ಸಂಸ್ಥೆಯ ಶ್ರೀಮತಿ ಶಾರದಾದೇವಿ ಕೋರೆ ಕಾಂಪೋಜಿಟ್ ಪ.ಪೂ ಕಾಲೇಜ, ಅಂಕಲಿ | ೨೦೦೪ |
| ೨೨. | ಲಿಂಗರಾಜ ಮಹಾವಿದ್ಯಾಲಯ | ೧೯೩೩ |
| ೨೩. | ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೪೭ |
| ೨೪. | ಶ್ರೀ.ಕಾಡಸಿದ್ದೇಶ್ವರ ಕಲಾ ಮತ್ತು ಎಚ್.ಎಸ್.ಕೋತಂಬ್ರಿ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೫೨ |
| ೨೫. | ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ | ೧೯೫೭ |
| ೨೬. | ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ | ೧೯೫೮ |
| ೨೭. | ಜಗದ್ಗುರು ತೋಂಟದಾರ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ | ೧೯೫೮ |
| ೨೮. | ಜಿ.ಎ.ಬಾಗೇವಾಡಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ | ೧೯೬೧ |
| ೨೯. | ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಹಾವೇರಿ | ೧೯೬೩ |
| ೩೦. | ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, ಬೆಂಗಳೂರು | ೧೯೬೩ |
| ೩೧. | ಶ್ರೀ ಶಿವಯೋಗಿ ಮುರಘೇಂದ್ರ ಸ್ವಾಮೀಜಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಅಥಣಿ | ೧೯೬೮ |
| ೩೨. | ಬಸವಪ್ರಭು ಕೋರೆ, ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಿಕ್ಕೋಡಿ. | ೧೯೬೯ |
| ೩೩. | ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ | ೧೯೭೫ |
| ೩೪. | ಶ್ರೀಮಂತ.ವಿ.ಎಸ್.ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ. | ೧೯೭೭ |

೩೫. ಮಹಿಳಾ ಮಹಾವಿದ್ಯಾಲಯ, ಗದಗ ೧೯೮೫

೩೬. ಕೆ.ಎಲ್.ಇ. ಸಂಸ್ಥೆಯ ಮಹಿಳಾ ಮಹಾವಿದ್ಯಾಲಯ, ಅಂಕೋಲಾ ೧೯೯೯

**ಶಿಕ್ಷಕ ತರಬೇತಿ ಸಂಸ್ಥೆಗಳು**

೧. ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ ೧೯೮೬

೨. ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು ೨೦೦೪

೩. ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಲಿಂಗರಾಜ ಕಾಲೇಜ ಆವರಣ, ಬೆಳಗಾವಿ ೨೦೦೪

೪. ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಅಥಣಿ ೨೦೦೪

೫. ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಅಂಕೋಲಾ ೨೦೦೪

೬. ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಜಿ.ಎ. ಬಾಗೇವಾಡಿ ಕಾಲೇಜು ಆವರಣ, ನಿಪ್ಪಾಣಿ ೨೦೦೪

೭. ಎಸ್.ಎಸ್.ಬಸವನಾಳ ಟೀಚರ್ಸ್ ಟ್ರೈನಿಂಗ್ ಇನಸ್ಟಿಟ್ಯೂಟ್, ಬೆಳಗಾವಿ ೧೯೩೯

೮. ಜೆ.ಜಿ.ಟೀಚರ್ಸ ಟ್ರೈನಿಂಗ್ ಕಾಲೇಜು, ಹುಬ್ಬಳ್ಳಿ ೧೯೪೭

೯. ಪ್ರೈಮರಿ ಟೀಚರ್ಸ ಟ್ರೈನಿಂಗ್ ಇನಸ್ಟಿಟ್ಯೂಟ್, ಅಂಕೋಲಾ ೧೯೬೪

೧೦. ಅಂಗನವಾಡಿ ಟ್ರೈನಿಂಗ ಇನಸ್ಟಿಟ್ಯೂಟ್, ಅಂಕೋಲಾ ೧೯೮೨

೧೧. ನರ್ಸರಿ ಟೀಚರ್ಸ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಮಾಲೂರು ೧೯೮೬

೧೨. ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಲಿಂಗರಾಜ ಕಾಲೇಜ ಆವರಣ, ಬೆಳಗಾವಿ ೧೯೮೨

೧೩. ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ ಇನ್‌ಸ್ಟಿಟ್ಯೂಟ, ಅಂಕೋಲಾ ೧೯೮೯

೧೪. ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ ಇನಸ್ಟಿಟ್ಯೂಟ ಅಥಣಿ ೨೦೦೪

| | | |
|---|---|---|
| ೧೫. | ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ್ ಇನ್‌ಸ್ಟಿಟ್ಯೂಟ, ಖಾನಾಪೂರ | ೨೦೦೪ |
| ೧೬. | ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ್ ಇನಸ್ಟಿಟ್ಯುಟ, ಅಂಕಲಿ | ೨೦೦೪ |
| ೧೭. | ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ್ ಇನಸ್ಟಿಟ್ಯುಟ, ಹಾವೇರಿ | ೨೦೦೪ |
| ೧೮. | ಕೆ.ಎಲ್.ಇ ಸಂಸ್ಥೆಯ ಟೀಚರ್ಸ ಟ್ರೈನಿಂಗ್ ಇನಸ್ಟಿಟ್ಯುಟ, ಗಂಗಾವತಿ | ೨೦೦೪ |

**ವೈದ್ಯಕೀಯ/ತಾಂತ್ರಿಕ/ತಂತ್ರಜ್ಞಾನ ಮಹಾವಿದ್ಯಾಲಯಗಳು**

| | | |
|---|---|---|
| ೧. | ಶ್ರೀ.ಬಿ.ಎಂ.ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯ, ಬೆಳಗಾವಿ | ೧೯೩೩ |
| ೨. | ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾವಿ | ೧೯೬೩ |
| ೩. | ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ | ೧೯೭೫ |
| ೪. | ಸರದಾರ ವಿ.ವಿ. ಪಾಟೀಲ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು. | ೧೯೭೬ |
| ೫. | ದಂತ ವಿಜ್ಞಾನ ಸಂಸ್ಥೆ, ಬೆಂಗಳೂರು | ೧೯೮೫ |
| ೬. | ದಂತ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ | ೧೯೮೭ |
| ೭. | ನರ್ಸಿಂಗ್ ಮಹಾವಿದ್ಯಾಲಯ, ಬೆಳಗಾವಿ | ೧೯೮೭ |
| ೮. | ದಂತ ವಿಜ್ಞಾನ ಸಂಸ್ಥೆ, ಬೆಂಗಳೂರು | ೧೯೯೨ |
| ೯. | ಔಷಧ ವಿಜ್ಞಾನ ಮಹಾವಿದ್ಯಾಲಯ, ನಿಪ್ಪಾಣಿ | ೧೯೯೨ |
| ೧೦. | ಔಷಧ ವಿಜ್ಞಾನ ಮಹಾವಿದ್ಯಾಲಯ, ಗದಗ | ೧೯೯೨ |
| ೧೧. | ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು | ೧೯೯೨ |
| ೧೨. | ಬ್ಯಾಚುಲರ್ ಆಫ್ ಫಿಜಿಯೋತೆರಪಿ, ಬೆಳಗಾವಿ | ೧೯೯೪ |
| ೧೩. | ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಫಾರ್ ಇಂಟಿಗ್ರೇಶನ್ ರಿಸರ್ಚ ಇನ್ ಟ್ರೇಡಿಷನಲ್ ಮೆಡಿಸಿನ್ ಕಾಲೇಜ್ ಆಫ್ ಫಾರ್ಮಸಿ, ಹುಬ್ಬಳ್ಳಿ, | ೨೦೦೨ |

೧೪. ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಶೂಶ್ರೂಷ ವಿಜ್ಞಾನ, ಹುಬ್ಬಳ್ಳಿ ೨೦೦೩

೧೫. ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಶಿಶ್ರೂಷ ವಿಜ್ಞಾನ, ಅಂಕೋಲಾ ೨೦೦೩

೧೬. ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಶಿಶ್ರೂಷ ವಿಜ್ಞಾನ, ಗೋಕಾಕ ೨೦೦೪

೧೭. ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಕಾಲೇಜ, ಅಥಣಿ ೨೦೦೪

೧೮. ಕೆ.ಎಲ್.ಇ. ಸಂಸ್ಥೆಯ ಬ್ಯಾಚುಲರ್ ಆಫ್ ಫಿಜಿಯೋತೆರಫಿ. ಹುಬ್ಬಳ್ಳಿ. ೨೦೦೪

೧೯. ಕೆ.ಎಲ್.ಇ. ಸಂಸ್ಥೆಯ ನ್ಯಾಚರೋಪಥಿ ಮತ್ತು ಯೋಗ ವಿಜ್ಞಾನ ಕೇಂದ್ರ, ಬೆಳಗಾವಿ ೨೦೦೪

೨೦. ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಆಸ್ಪತ್ರೆ, ಬೆಳಗಾವಿ ೧೯೩೮

೨೧. ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಫಾರ್ಮಸಿ, ಬೆಳಗಾವಿ. ೧೯೩೮

೨೨. ಡಾ॥ ಕಮಲ ಆಸ್ಪತ್ರೆ ಮತ್ತು ಸಂಶೋಧನಾ, ಅಂಕೋಲಾ ೧೯೭೯

೨೩. ದಂತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ ೧೯೮೫

೨೪. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರ, ಬೆಳಗಾವಿ ೧೯೮೬

೨೫. ದಂತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ೧೯೯೨

೨೬. ಕೆ.ಎಲ್.ಇ. ಸಂಸ್ಥೆಯ ತುರ್ತುನಿಗಾ ಘಟಕ ನಿಲಿಜಿನ್ ರೋಡ್, ಹುಬ್ಬಳ್ಳಿ ೨೦೦೨

೨೭. ಕೆ.ಎಲ್.ಇ. ಸಂಸ್ಥೆಯ ಹಾರ್ಟ ಫೌಂಡೇಶನ್, ಬೆಳಗಾವಿ ೨೦೦೩

೨೮. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಐ.ಸಿ.ಯು, ಗೋಕಾಕ್ ೨೦೦೩

೨೯. ಕೆ.ಎಲ್.ಇ. ಸಂಸ್ಥೆಯ ಕಿಡ್ನಿ ಫೌಂಡೇಶನ್, ಬೆಳಗಾವಿ ೨೦೦೩

೩೦. ಕೆ.ಎಲ್.ಇ. ಸಂಸ್ಥೆಯ ಹೃದ್ರೋಗ ಸಂಸ್ಥೆ, ಹುಬ್ಬಳ್ಳಿ ೨೦೦೩

| | | |
|---|---|---|
| ೩೧. | ಬಿ.ವಿ.ಭೂಮರೆಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೪೭ |
| ೩೨. | ಜಾಬ್ ಓರಿಯೆಂಟೆಡ್ ಕೋರ್ಸ್, ಬೆಳಗಾವಿ | ೧೯೭೮ |
| ೩೩. | ಕೆ.ಎಲ್.ಇ. ಸಂಸ್ಥೆಯ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ | ೧೯೭೯ |
| ೩೪. | ಸಿ.ಬಿ.ಕೋರೆ ಪಾಲಿಟೆಕ್ನಿಕ್, ಚಿಕ್ಕೋಡಿ | ೧೯೮೪ |
| ೩೫. | ಸಿ.ಬಿ.ಕೊಳ್ಳಿ, ಪಾಲಿಟೆಕ್ನಿಕ್, ಹಾವೇರಿ | ೧೯೮೪ |
| ೩೬. | ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಹುಬ್ಬಳ್ಳಿ | ೧೯೮೪ |
| ೩೭. | ಜಾಬ್ ಓರಿಯೆಂಟೆಡ್ ಕೋರ್ಸ್, ಹಾವೇರಿ | ೧೯೮೪ |
| ೩೮. | ಇನಸ್ಟಿಟ್ಯೂಟ್ ಆಫ್ ಹೋಟೇಲ್ ಮ್ಯಾನೇಜಮೆಂಟ್ ಅಂಡ್ ಕೇಟರಿಂಗ್ ಟೆಕ್ನಾಲಜಿ, ಬೆಂಗಳೂರು | ೧೯೯೨ |
| ೩೯. | ವ್ಯವಹಾರ ಆಡಳಿತ ಮಹಾವಿದ್ಯಾಲಯ, ಹುಬ್ಬಳ್ಳಿ (ಎಂ.ಬಿ.ಎ) | ೧೯೯೬ |
| ೪೦. | ವ್ಯವಹಾರ ಆಡಳಿತ ಮಹಾವಿದ್ಯಾಲಯ, ಬೆಳಗಾವಿ (ಬಿ.ಬಿ.ಎ) | ೧೯೯೬ |
| ೪೧. | ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನ ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೯೦ |
| ೪೨. | ವ್ಯವಹಾರ ನಿರ್ವಹಣೆ ಸಂಸ್ಥೆ, ಬೆಂಗಳೂರು(ಬಿ.ಬಿ.ಎಮ್) | ೧೯೯೮ |
| ೪೩. | ಫ್ಯಾಶನ್ ಟೆಕ್ನಾಲಜಿ ಅಂಡ್ ಅಪೇರಲ್ ಡಿಜಾಯಿನ್ ಇನಸ್ಟಿಟ್ಯೂಟ್, (ಎಫ್.ಎ.ಡಿ) ಬೆಂಗಳೂರು | ೧೯೯೯ |
| ೪೪. | ಬಿ.ಸಿ.ಎ. ಇನ್ಸ್ಟಿಟ್ಯೂಟ್, ಹುಬ್ಬಳ್ಳಿ | ೧೯೯೯ |
| ೪೫. | ಬಿ.ಸಿ.ಎ. ಇನ್‌ಸ್ಟಿಟ್ಯೂಟ್, ಗದಗ | ೧೯೯೯ |
| ೪೬. | ಬಿ.ಸಿ.ಎ. ಇನ್ಸ್ಟಿಟ್ಯೂಟ್, ಬೆಳಗಾವಿ | ೧೯೯೯ |
| ೪೭. | ಬಿ.ಸಿ.ಎ. ಇನ್ಸ್ಟಿಟ್ಯೂಟ್, ಬೆಂಗಳೂರು | ೧೯೯೯ |

| | | |
|---|---|---|
| ೪೮. | ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷಶನ್ಸ, ಬಿ.ವಿ.ವಿ . ಇಂಜನೀಯರಿಂಗ್ ಕಾಲೇಜ್, ಹುಬ್ಬಳ್ಳಿ | ೧೯೯೯ |
| ೪೯. | ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷಶನ್ಸ, ಕೆ.ಎಲ್.ಇ. ಇಂಜನೀಯರಿಂಗ್ ಕಾಲೇಜ್, ಬೆಳಗಾವಿ | ೧೯೯೯ |
| ೫೦. | ಇನ್ ಸ್ಟಿಟ್ಯೂಟ್ ಆಫ್ ಟೂರಿಸಂ ಅಡ್ಮಿನಿಸ್ಟ್ರೇಶನ್, (ಎಂ.ಟಿ.ಎ) ಬೆಂಗಳೂರು | ೧೯೯೯ |
| ೫೧. | ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷಶನ್ಸ, (ಎಂ.ಸಿ.ಎ) ಬೆಂಗಳೂರು | ೨೦೦೧ |
| ೫೨. | ಕೆ.ಎಲ್.ಇ. ಸಂಸ್ಥೆಯ ಐ.ಟಿ.ಐ, ಗೋಕಾಕ | ೨೦೦೩ |
| ೫೩. | ಕೆ.ಎಲ್.ಇ. ಸಂಸ್ಥೆಯ ಕೃಷಿ ತರಬೇತಿ ಶಾಲೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ | ೧೯೯೯ |

## ಕಾನೂನು ಮಹಾವಿದ್ಯಾಲಯಗಳು

| | | |
|---|---|---|
| ೧. | ಜಿ.ಕೆ. ಕಾನೂನು ಮಹಾವಿದ್ಯಾಲಯ, ಹುಬ್ಬಳ್ಳಿ | ೧೯೭೪ |
| ೨. | ಎಸ್. ಎ. ಮಾನ್ವಿ ಕಾನೂನು ಮಹಾವಿದ್ಯಾಲಯ, ಗದಗ | ೧೯೭೪ |
| ೩. | ಬಿ.ವಿ. ಬೆಲ್ಲದ ಕಾನೂನು ಮಹಾವಿದ್ಯಾಲಯ, ಬೆಳಗಾವಿ | ೧೯೭೫ |
| ೪. | ಕಾನೂನು ಮಹಾವಿದ್ಯಾಲಯ, ಬೆಂಗಳೂರ | ೧೯೭೫ |
| ೫. | ಕಾನೂನು ಮಹಾವಿದ್ಯಾಲಯ, ಚಿಕ್ಕೋಡಿ | ೧೯೯೯ |

## ಸ್ವಾಯತ್ತ ಪದವಿ ಕಾಲೇಜುಗಳು

೧. ಲಿಂಗರಾಜ ಕಾಲೇಜು, ಬೆಳಗಾವಿ

೨. ಪಿ.ಸಿ. ಜಾಬಿನ ಕಾಲೇಜು, ಹುಬ್ಬಳ್ಳಿ

**ಕೆ.ಎಲ್.ಇ. ಆಡಳಿತಕ್ಕೆ ಸೇರ್ಪಡೆಗೊಂಡ ಸಂಸ್ಥೆಗಳು**

| | | |
|---|---|---|
| ೧. | ಕಂಕಣವಾಡಿ ಆಯುರ್ವೇದಿಕ ವಿದ್ಯಾಪೀಠ ಸಂಸ್ಥೆ, ಶಹಾಪೂರ, ಬೆಳಗಾವಿ | ೧೯೯೧ |
| ೨. | ಗೋಕಾಕ ವಿದ್ಯಾವರ್ಧಕ ಸಂಘ, ಗೋಕಾಕ | ೧೯೯೩ |
| ೩. | ಎಸ್.ವಿ.ಎಸ್. ಸಂಸ್ಥೆ, ಮಾಲೂರು | ೧೯೯೩ |
| ೪. | ನೂತನ ಶಿಕ್ಷಣ ಸಭಾ, ಅಂಕೋಲಾ | ೧೯೯೭ |
| ೫. | ಅಂಕಲಿ ಎಜ್ಯುಕೇಷನ್ ಸಂಸ್ಥೆ, ಅಂಕಲಿ | ೨೦೦೪ |
| ೬. | ವಿಮಲ ಶಿಕ್ಷಣ ಪ್ರಸಾರಕ ಮಂಡಳಿ, ಸೊಲ್ಲಾಪುರ | ೨೦೦೪ |
| ೭. | ರಾಣೆಬೆನ್ನೂರ ಗ್ರಾಮಸೇವಾ ಮಂಟಪ, ಹನುಮನಟ್ಟಿ | ೨೦೦೮ |
| ೮. | ಶ್ರೀ ಸಿ.ವಿ. ಟ್ರಸ್ಟ್ ಫಂಡ್, ಮಹಾಲಿಂಗಪುರ | ೨೦೦೮ |

**ಇತರ ಸಂಸ್ಥೆಗಳು**

| | | |
|---|---|---|
| ೧. | ಫ್ಯಾಮಿಲಿ ಕೌನ್ಸಿಲಿಂಗ್ ಸೆಂಟರ್, ಅಂಕೋಲಾ | ೧೯೧೯ |
| ೨. | ಕೆ.ಎಲ್.ಇ ಸಂಸ್ಥೆಯ ಹಾಸ್ಟೆಲ್ಸ್, ಬೆಳಗಾವಿ | ೧೯೨೫ |
| ೩. | ತೋಂಟದಾರ್ಯ ಮುದ್ರಣಾಲಯ, ಹುಬ್ಬಳ್ಳಿ | ೧೯೨೫ |
| ೪. | ಎಲ್.ಕೆ.ಖೋತ ಕಲ್ಯಾಣ ಮಂಟಪ, ಅಥಣಿ | ೧೯೮೮ |
| ೫. | ಕೆ.ಎಲ್.ಇ ಸಂಸ್ಥೆಯ ಹಾಸ್ಟೆಲ್ಸ್, ಬೆಂಗಳೂರು | ೧೯೯೬ |
| ೬. | ವರ್ಕಿಂಗ್ ವುಮೆನ್ಸ್ ಹಾಸ್ಟೆಲ್, ಗೋಕಾಕ | ೧೯೯೬ |
| ೭. | ವರ್ಕಿಂಗ್ ವುಮೆನ್ಸ್ ಹಾಸ್ಟೆಲ್, ಅಂಕೋಲಾ | ೨೦೦೩ |
| ೮. | ಕೆ.ಎಲ್.ಇ ಸಂಸ್ಥೆಯ ಧರ್ಮಶಾಲಾ ಕೆ.ಎಲ್.ಇ. ಆಸ್ಪತ್ರೆಯ ಆವರಣ, ಬೆಳಗಾವಿ | ೨೦೦೩ |

**ಉಪಗ್ರಹ ಆಧಾರಿತ ದಂತಚಿಕಿತ್ಸಾಲಯಗಳು**

೧. ನಿಪ್ಪಾಣಿ

೨. ಬೈಲಹೊಂಗಲ

೩. ಗಡಹಿಂಗ್ಲಜ

೪. ಗೋಕಾಕ

೫. ಬೆಳಗಾವಿ

೬. ಶಹಾಪೂರ

೭. ಅರವಳ್ಳಿ/ಶಿರಾಲಿ, (ಮಹಾರಾಷ್ಟ್ರ)

**ಕೆ.ಎಲ್.ಇ. ಸೊಸೈಟಿಯ ಒಡೆತನದ ನಿವೇಶನಗಳು**

ಕೆ.ಎಲ್.ಇ. ಸಂಸ್ಥೆಯು ೧೯೧೬ ರಲ್ಲಿ ಗಿಲಗಂಚಿ ಅರಟಾಳ ಹೈಸ್ಕೂಲನ್ನು ಪ್ರಾರಂಭಿಸುತ್ತಲೇ ತನ್ನ ಅಂಗಸಂಸ್ಥೆಗಳಿಗೆ ಸ್ವತಂತ್ರ ಕಟ್ಟಡಗಳನ್ನು ಹೊಂದುವ ಸಲುವಾಗಿ ನಿವೇಶನಗಳನ್ನು ಖರೀದಿಸಲು ಪ್ರಯತ್ನಗಳನ್ನು ಪ್ರಾರಂಭಿಸಿತು. ಸಂಸ್ಥಾಪಕರ ಅವಿರತ ಶ್ರಮ, ದೂರದೃಷ್ಟಿ ಹಾಗೂ ಲಿಂಗಾಯತ ಸಮಾಜದ ಅಭಿಮಾನಿಗಳ ಉದಾರ ದೇಣಿಗೆಗಳ ನೆರವಿನಿಂದ ೧೯೨೮-೨೯ ರ ಸುಮಾರಿಗೆ ೧೭ ಎಕರೆಯಷ್ಟು ವಿಶಾಲವಾದ ನಿವೇಶನವನ್ನು ಬೆಳಗಾವಿಯ ಅತ್ಯಂತ ಆಯಕಟ್ಟಿನ ಸ್ಥಳದಲ್ಲಿ ಖರೀದಿಸಿತು. ಮುಂದೆ ಮತ್ತೆ ೯ ಎಕರೆಯಷ್ಟು ಹೆಚ್ಚಿನ ಜಾಗವನ್ನೂ ಖರೀದಿಸಿತು. ಒಟ್ಟಾರೆ ೨೬ ಎಕರೆ ಕ್ಷೇತ್ರ ಬೆಳಗಾವಿಯ ಮಧ್ಯವರ್ತಿ ಸ್ಥಳದಲ್ಲಿ ಪಡೆದು ಹಲವಾರು ಸ್ವತಂತ್ರ, ಭವ್ಯ ಹಾಗೂ ಸುಂದರ ಕಟ್ಟಡಗಳನ್ನೂ ನಿರ್ಮಿಸಿದೆ. ಧಾರವಾಡದಲ್ಲಿ ೧೯೨೯ ರಲ್ಲಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯು ಹೊಂದಿದ್ದ ನಿವೇಶನದಲ್ಲಿ ಸುಮಾರು ೭ ಎಕರೆಯಷ್ಟು ಭೂಮಿ ಖರೀದಿಸಿತು. ಹುಬ್ಬಳ್ಳಿಯಲ್ಲಿ ಬಿ.ವ್ಹಿ.ಬಿ. ಇಂಜಿನಿಯರಿಂಗ್ ಕಾಲೇಜು ಕಟ್ಟಡವಿರುವ ಕ್ಷೇತ್ರ ೯೯ ಎಕರೆಗಳಷ್ಟಾಗುತ್ತದೆ. ಅದೇ ಹುಬ್ಬಳ್ಳಿಯಲ್ಲಿ ಜಗದ್ಗುರು ಗಂಗಾಧರ ಕಾಮರ್ಸ್ ಕಾಲೆಜಿಗೆ ೯ ಎಕರೆ ಜಾಗ ಖರೀದಿಸಲಾಯಿತು. ೧೯೬೩ ರ ಸಲುಮಾರಿಗೆ ಬೆಳಗಾವಿಯಲ್ಲಿ ಜೆ.ಎನ್. ಮೆಡಿಕಲ್ ಕಾಲೇಜಿಗಾಗಿ ೧೦೦ ಎಕರೆಯಷ್ಟು ಭೂಮಿಯನ್ನು ಖರೀದಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿಯೂ ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಲೀ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಬೆಳಗಾವಿಯಲ್ಲಿ ೫೦ ಎಕರೆ ಭೂಮಿ, ಹುಬ್ಬಳ್ಳಿಯಲ್ಲಿ ೧೯೩ ಎಕರೆ ಭೂಮಿ, ನವದೆಹಲಿಯಲ್ಲಿ ೪ ಎಕರೆ ಜಮೀನು ಖರೀದಿಸಲಾಗಿದೆ. ಬೆಂಗಳೂರಿನ ಯಶವಂತಪುರದಲ್ಲಿ ೩ ಎಕರೆ, ನಾಗರಭಾವಿಯಲ್ಲಿ ೫ ಎಕರೆ, ಬೆಳಗಾವಿ

ಕಿಲ್ಲೆಯಲ್ಲಿ ಭಾಡಿಗೆಗೆ ಪಡೆದಿದ್ದ ಕೆ.ಎಲ್.ಇ. ಸಂಸ್ಥೆಯ ಹಾಸ್ಟೇಲ್ ನಿವೇಶನ (ಸುಮಾರು ೧ ಎಕರೆ)ಯನ್ನು ಮಾಲೀಕರಿಂದ ದೇಣಿಗೆಯಾಗಿ ಪಡೆದುಕೊಂಡಿದ್ದು, ಸವದತ್ತಿಯಲ್ಲಿ ಹೊಸದಾಗಿ ಕಟ್ಟಡ (ಗೋಡೌನ್) ಖರೀದಿಸಲಾಗಿದೆ. ಚಾರಿತ್ರಿಕ ಘಟನೆಗಳಾಗಿ ಇವೆಲ್ಲ ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿಯ ಹಾಗೂ ಇತರ ಪದಾಧಿಕಾರಿಗಳ ಧೈರ್ಯ ಹಾಗೂ ಸಾಹಸಕ್ಕೆ ಸಂಕೇತವಾಗಿವೆ. ಕೆ.ಎಲ್.ಇ. ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರದ ಸಾವಿರ ಹಾಸಿಗೆಗಳ ಬೃಹತ್ ಕಟ್ಟಡಕ್ಕೆ ೧೧೨ ಕೋಟಿ ರೂಪಾಯಿಗಳಷ್ಟು ಹಣ ವೆಚ್ಚ ಮಾಡಿದ್ದು ಹಾಗೂ ಅದಕ್ಕಾಗಿ ನಾನಾ ಮೂಲಗಳಿಂದ ಧೈರ್ಯಮಾಡಿ ಸಾಲ ತಂದು ಆ ಕಟ್ಟಡವನ್ನು ನಿರ್ಮಿಸಿದ್ದು, ವೀರಶೈವರ ಶತಮಾನದ ಕನಸನ್ನು ಪೂರ್ಣಗೊಳಿಸಿದಂತಾಗಿದೆ. ಇವೆಲ್ಲ ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲದೇ ದೇಶದ ವಿವಿಧೆಡೆಗಳಲ್ಲಿ ಶಿಕ್ಷಣ ದಾಸೋಹಕ್ಕಾಗಿ ನಿವೇಶನಗಳನ್ನು ಪಡೆದುಕೊಂಡು ನಾನಾ ಮೂಲಗಳಿಂದ ಧೈರ್ಯಮಾಡಿ ಸಾಲ ತಂದು ಕಟ್ಟಡಗಳನ್ನು ನಿರ್ಮಿಸಿದ್ದು ವೀರಶೈವರ ಶತಮಾನದ ಕನಸನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಇಂದಿಗೂ ಪರಿಶ್ರಮಿಸುತ್ತಿದೆ.

**ವಿದೇಶಕ್ಕೂ ವ್ಯಾಪಿಸಿದ ಕೆ.ಎಲ್.ಇ. ಸಂಸ್ಥೆಯ ಕೀರ್ತಿ**

ಕೆ.ಎಲ್.ಇ. ೧೯೧೬ ರಲ್ಲೇ ಸ್ಥಾಪನೆಯಾಗಿದ್ದರೂ, ಕೋರೆ ಚುಕ್ಕಾಣಿ ಹಿಡಿಯುವವರೆಗೂ ಅದು ಸಾಂಪ್ರದಾಯಿಕ ಶಿಕ್ಷಣಕ್ಕೆ ಸೀಮಿತವಾಗಿತ್ತು. ೧೯೮೪ ರಲ್ಲಿ ಕೋರೆಯವರು ಅಧ್ಯಕ್ಷರಾದಾಗ ಸಂಸ್ಥೆಯ ದಿಕ್ಕು ಬದಲಾಯಿತು. ಆಗ ಕೇವಲ ೩೭ರ ವಯಸ್ಸಿನವರಿದ್ದ ಕೋರೆ ಸಂಸ್ಥೆಯನ್ನು ರಾಕೆಟ್ ವೇಗದಲ್ಲಿ ಮೇಲೊಯ್ದಿದ್ದಾರೆ. ಇರುವ ಎಲ್ಲ ತರಹದ ಶಿಕ್ಷಣ ಪದ್ಧತಿಗಳನ್ನು ಅಳವಡಿಸಿ ಹೊಸತನಕ್ಕೆ ಹುಡುಕುತ್ತಿದ್ದಾರೆ. ಸಂಸ್ಥೆಯ ಆಸ್ತಿ, ಜಾಗೆ, ಕಟ್ಟಡ, ಇಮಾರತುಗಳು ಈಗ ಸಾವಿರ ಪಟ್ಟು ಹೆಚ್ಚಿವೆ. ಕೋರೆಯವರಲ್ಲಿ ಉಪಕಾರ ಸ್ಮರಣೆಯ ಗುಣ ಗುರುತಿಸುವಂತಿದೆ. ಮಟ್ಟಿ ಶಾಲೆಯಿಂದ ಆರಂಭವಾದ ಕೆ.ಎಲ್.ಇ. ಇಂದು ವಿಶ್ವವಿದ್ಯಾಲಯ ಹೊಂದಿದೆ. ಇದರ ಸ್ಥಾಪನೆಯ ಕರ್ತೃಗಳಾದ ಸಪ್ತರ್ಷಿಗಳ ಹೆಸರನ್ನು ಸದಾ ಸ್ಮರಿಸಲು ಏಳು ಅಂಗ ಸಂಸ್ಥೆಗಳಿಗೆ ಇಟ್ಟಿದ್ದಾರೆ. ೧೯೯೧ ರಲ್ಲಿ ಈ ಕೆಲಸವನ್ನು ವಿದ್ಯುಕ್ತವಾಗಿ ಮಾಡಿದ್ದಾರೆ. ಲಿಂಗಾಯತ ಸಮಾಜದ ಯೋಗದಾನದ ಸ್ಮರಣೆಗೆ ಕೆ.ಎಲ್.ಇ.ಗೆ ೧೯೯೫ ರಲ್ಲಿ ಮರುನಾಮಕರಣ ಮಾಡಿದ್ದಾರೆ.

ಕೋರೆಯವರಿಗೆ ಶಿಕ್ಷಣಪ್ರೇಮ ರಕ್ತಗತವಾಗಿ ಬಂದಿದೆ. ತಂದೆ ಬಸವಪ್ರಭು ಶಾಲೆಗಳನ್ನು ನಡೆಸುತ್ತಿದ್ದರು. ಆ ಪ್ರಭಾವ, ಆಡಳಿತಾತ್ಮಕ ನಡೆ ಮತ್ತು ಸಮಯೋಚಿತ ನಿರ್ಧಾರಗಳು ಅವರನ್ನು ಇಂದು ಈ ಮಟ್ಟಕ್ಕೆ ತಂದಿವೆ. ಕೋರೆಯವರ ೨೫ ವರ್ಷಗಳ ಆಡಳಿತವನ್ನು ವಿವಿಧ ಘಟ್ಟವಾಗಿ ನೋಡಬಹುದು. ೧೯೮೪ ರ ವರೆಗೆ ಸಂಸ್ಥೆಗೆ ಕೇವಲ ೩೩ ರಿಂದ ೩೮ ಅಂಗ ಸಂಸ್ಥೆಗಳಿದ್ದವು.

ಕೋರೆ ಸಂಸ್ಥೆಯನ್ನು ಹೊಸ ದೃಷ್ಟಿಕೋನದಿಂದ ನೋಡಿದರು. ಆರೋಗ್ಯ, ತಾಂತ್ರಿಕ ಒಳಗೊಂಡು ವೃತ್ತಿ ಆಧಾರಿತ ಕೋರ್ಸಗಳಿಗೆ ಒಲವು ತೋರಿದರು. ಸಿಬ್ಬಂದಿ, ಶಿಕ್ಷಕರಲ್ಲೂ ಬದಲಾವಣೆ ತರಲಾಯಿತು. ಇವರ ತಂಡಗಳನ್ನು ತರಬೇತಿಗೆ ವಿದೇಶಕ್ಕೂ ಕಳಿಸಿಕೊಡಲಾಗಿದೆ. ವಿದ್ಯಾರ್ಥಿಗಳೂ ಇಂಥ ಸುವರ್ಣಾವಕಾಶ ಪಡೆದುಕೊಂಡಿದ್ದಾರೆ. ೨೦೦೭-೨೦೦೮ ನೇ ಸಾಲಿನ ೬ ತಿಂಗಳ ಅವಧಿಯಲ್ಲಿ ಅಂಗಸಂಸ್ಥೆಗಳು ದುಪ್ಪಟ್ಟಾಗಿವೆ. ಹೊಸ ಕೋರ್ಸುಗಳ ಪರಿಚಯವಾಗಿದೆ. ಕಾಲೇಜುಗಳನ್ನು ಕಟ್ಟಲಾಗಿದೆ. ಕೆ.ಎಲ್.ಇ. ಸಂಸ್ಥೆಗೆ ಈಗ ೨೧೦ ಅಂಗ ಸಂಸ್ಥೆಗಳಿವೆ. ಕಠಿಣ ಸಂದರ್ಭದಲ್ಲೂ ಕೋರೆಯವರು ಸಂಸ್ಥೆಯ ವ್ಯವಸ್ಥೆ ಕುಸಿಯಲು ಬಿಟ್ಟಿಲ್ಲ. ದೇಣಿಗೆದಾರರ ಮನವೊಲಿಸಿ ಕೆ.ಎಲ್.ಇ. ಶಿಕ್ಷಣ ಸಾಮ್ರಾಜ್ಯ ಕಟ್ಟಿದ್ದಾರೆ. ಸಾವಿರಾರು ಜನರಿಗೆ ಉದ್ಯೋಗ ನೀಡಿದ್ದಾರೆ.

ಸಂಸ್ಥೆಯ ಸೇವೆಯನ್ನು ಕೋರೆ ಕೇವಲ ಶಿಕ್ಷಣಕ್ಕೆ ಸೀಮಿತಗೊಳಿಸದೇ ಆರೋಗ್ಯ ಸೇವೆಗೂ ವಿಸ್ತರಿಸಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ವಿಷ್ಯಾದ ಅತ್ಯಾಧುನಿಕ ಆಸ್ಪತ್ರೆಗಳಲ್ಲೊಂದಾಗಿದೆ. ಅದರ ಕವಲುಗಳು ಈಗ ಕರ್ನಾಟಕ, ಮಹಾರಾಷ್ಟ್ರದಲ್ಲಿಯೂ ಹಬ್ಬತೊಡಗಿವೆ. ವಿದೇಶಿ ಆಸ್ಪತ್ರೆ, ವಿಶ್ವವಿದ್ಯಾಲಯಗಳ ಜೊತೆಗೆ ಒಪ್ಪಂದವೇರ್ಪಟ್ಟಿದೆ. ಆಸ್ಪತ್ರೆ ಮತ್ತು ಕೆ.ಎಲ್.ಇ. ಅದೆಷ್ಟೇ ಬೆಳೆದರೂ ಸಾಮಾಜಿಕ ಜವಾಬ್ದಾರಿ ಹಾಗೂ ಕರ್ತವ್ಯಪ್ರಜ್ಞೆ ಮರೆತಿಲ್ಲ.

ಶಿಕ್ಷಣ ಮತ್ತು ಕೆ.ಎಲ್.ಇ. ಇತಿಹಾಸದಲ್ಲಿ ಕೋರೆ ಎಂದಿಗೂ ಸ್ಮರಣೀಯ. ಈ ಧನ್ಯತಾಭಾವ ಜನರಲ್ಲಿದೆ. ಅಳಿಸಲಾಗದ ಈ ಸಾರ್ಥಕ ಸೇವೆಗಾಗಿ ಕೋರೆ ಜನರಿಗೆ ಹಿಡಿಸುತ್ತಾರೆ. ಇವರಿಬ್ಬರ ನಡುವಿನ ವಿಶ್ವಾಸ ಮತ್ತು ಪ್ರೀತಿ ದ್ವಿಗುಣಗೊಳ್ಳುತ್ತಾ ನಡೆದಿದೆ.

**ಕೆ.ಎಲ್.ಇ. ವಿಶ್ವವಿದ್ಯಾಲಯ ಜತೆ ಒಡಂಬಡಿಕೆ ಮಾಡಿಕೊಂಡ ಸಂಸ್ಥೆಗಳು**

| ಅ.ನಂ. | ವಿಶ್ವವಿದ್ಯಾಲಯ/ಸಂಸ್ಥೆ | ಕೋರ್ಸು |
|---|---|---|
| ೧. | ಸಂಡರಲ್ಯಾಮಡ ಯುನಿವರ್ಸಿಟಿ, ಯು.ಕೆ. | ಫಾರ್ಮಾಸ್ಯುಟಿಕಲ್ ವಿಜ್ಞಾನಗಳು |
| ೨. | ಯುನಿವರ್ಸಿಟಿ ಆಫ್ ಇಲಿನಾಯ್ಸ್, ಯು.ಎಸ್.ಎ. | ವೊಲ್ಯಾಕ್ಯುಲರ ಬ್ರೊಟೊಜಿ ವೈದ್ಯಕೀಯ ಶಿಕ್ಷಣ |
| ೩. | ಬ್ಲೇರ್ ಎಜ್ಯುಕೇಷನ್ ಸರ್ವಿಸಸ್, ಪಿ.ಆಯ್.ಯು.ಪಿ. ಮಲೇಶಿಯಾ | ವೈದ್ಯಕೀಯ ಪದವಿ/ ದಂತವೈದ್ಯಕೀಯ ಶಿಕ್ಷಣ |

| | | |
|---|---|---|
| ೪. | ಯುನಿವರ್ಸಿಟಿ ಆಫ್ ಮಿಶಿಗನ್ ಯು.ಎಸ್.ಎ. | ಮಾಸ್ಟರ ಆಫ್ ಪಬ್ಲಿಕ್ ಹೆಲ್ತ್ |
| ೫. | ಕ್ಲಿನಿಕ್ ಡ್ಯು ಡಾಕ್ಟರ ಜೀನ್ ಕಾಸ್ಸೀ (ಫ್ರಾನ್ಸ್) | ಫೆಲೋಶಿಪ್ ಪ್ರೊಗ್ರಾಮ – ಓಟಾಲಜಿ, ನೆಟವರ್ಕಿಂಗ್ ಸೆಂಟರ್ ಫಾರ್ ಲೈವ್ ಇಂಟರನ್ಯಾಶನಲ್ ಓಟೋಲಾಜಿ ನೆಟ್‌ವರ್ಕ್ – ೨೦೦೮ ಆ್ಯಂಡ್ ಜಾಯಿಂಟ ರೀಸಚ ಪಬ್ಲಿಕೇಶನ್ಸ |

**ಕೆ.ಎಲ್.ಇ. ವಾರ್ತಾಪತ್ರ ಪರಿವೀಕ್ಷಣೆ**

ಕೆ.ಎಲ್.ಇ. ಸಂಸ್ಥೆ ತನ್ನದೇ ಆದ ಒಂದು ವಾರ್ತಾಪತ್ರವನ್ನು ಹೊರಡಿಸಬೇಕು ಎಂಬ ಬಹುದಿನದ ಆಶಯ ಕೈಗೂಡಿದ್ದು ೨೦೦೦ ನೇ ವರ್ಷ ಜನವರಿ ತಿಂಗಳಲ್ಲಿ. ಮೊದಲನೆಯ ಸಂಚಿಕೆ ಜನವರಿ ೧೮ ರಂದು ಖ್ಯಾತ ಪತ್ರಕರ್ತ ಶ್ರೀ ಕೆ. ಶಾಮರಾವ್ ಅವರಿಂದ ಬಿಡುಗಡೆಗೊಂಡಿತು. ಈ ಸಮಾರಂಭದಲ್ಲಿ ನಾಗನೂರು ರುದ್ರಾಕ್ಷಿಮಠದ ಶ್ರೀಗಳಲ್ಲದೆ, ಖ್ಯಾತ ಕವಿ ಶ್ರೀ ಚೆನ್ನವೀರ ಕಣವಿ, ಸಾಹಿತಿ ಶ್ರೀ ಮನು ಬಳಿಗಾರ ಮೊದಲಾದವರು ಪಾಲ್ಗೊಂಡಿದ್ದರು. ಈ ವಾರ್ತಾಪತ್ರ ಮೂರು ತಿಂಗಳಿಗೊಮ್ಮೆ ಪ್ರಕಟವಾಗುತ್ತ ಮುನ್ನಡೆದಿದೆ. ಈ ವಾರ್ತಾಪತ್ರದ ಸಂಪಾದಕರಾಗಿ ಪ್ರಾ. ಬಿ.ಎಸ್. ಗವಿಮಠ, ಪ್ರೊ. ಆಯ್.ಶೆಟ್ಟರ ಹಾಗೂ ಪ್ರೊ. ಎ.ಆರ್. ಪಾಟೀಲ ಇವರು ಕಾರ್ಯನಿರ್ವಹಿಸುತ್ತಿದ್ದಾರೆ.

**ಕೆ.ಎಲ್.ಇ. ಪ್ರಸಾರಾಂಗ**

ಕೆ.ಎಲ್.ಇ. ಪ್ರಸಾರಾಂಗ ಡಾ. ಪ್ರಭಾಕರ ಕೋರೆಯವರ ಕನಸಿನ ಕೂಸು. ಪ್ರಸಾರಾಂಗದ ಮೂಲಕ ಕೆ.ಎಲ್.ಇ. ಸಂಸ್ಥೆಗೆ ಸಾಂಸ್ಕೃತಿಕ ಮುಖವನ್ನು ರೂಪಿಸಿದ ಶ್ರೇಯಸ್ಸು ಡಾ. ಕೋರೆಯವರಿಗೆ ಸಲ್ಲಬೇಕು. ೧೯೯೭ ರಲ್ಲಿ "ಶಿ.ಶಿ. ಬಸವನಾಳರ ಜೀವ ಮತ್ತು ಸಾಧನೆ" ಕೃತಿಯ ಪ್ರಕಟಣೆಯೊಂದಿಗೆ ನಾಂದಿ ಹಾಡಿದ ಪ್ರಸಾರಾಂಗ ಇಲ್ಲಿವರೆಗೆ ಹತ್ತಾರು ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿಯವರ ಅಖಂಡ ಮಾರ್ಗದರ್ಶನದಲ್ಲಿ ಸಾಗಿ ಬಂದಿರುವ ಪ್ರಸಾರಾಂಗ ಕೆ.ಎಲ್.ಇ. ಸಂಸ್ಥೆಯ ಹಲವಾರು ಪುಸ್ತಕಗಳನ್ನು ವಿವಿಧ ಯೋಜನೆಗಳಡಿಯಲ್ಲಿ ಪ್ರಕಟಿಸಿದ ಕೀರ್ತಿಗೆ ಪಾತ್ರವಾಗಿದೆ. ಕೆ.ಎಲ್.ಇ. ಪ್ರಸಾರಾಂಗದ ಜೊತೆಗೆ ಲಿಂಗರಾಜ ಮಹಾವಿದ್ಯಾಲಯದ ಕನ್ನಡ ವಿಭಾಗವು ಸಾಹಿತ್ಯಿಕ ಚಟುವಟಿಕೆಗಳನ್ನು ಬಹಳಷ್ಟು ತ್ವರಿತಗತಿಯಲ್ಲಿಯೇ ಪ್ರಾರಂಭಿಸಿದೆ.ಅದರಲ್ಲಿ ಪ್ರಮುಖವಾಗಿ;

**೧. ಪ್ರಕೃತಿ ಮತ್ತು ಪರಿಸರ**

ಇದು ಲಿಂಗರಾಜ ಮಹಾವಿದ್ಯಾಲಯ ಕನ್ನಡ ವಿಭಾಗದ ಮೊದಲ ಪ್ರಕಟಣೆ.ಬಿ.ಎ ಮೊದಲ ಸೆಮಿಸ್ಟರ ವಿದ್ಯಾರ್ಥಿಗಳಿಗೆ ರೂಪಿಸಿಕೊಂಡ ಪಠ್ಯವಿದು. ವಿದ್ಯಾರ್ಥಿಗಳಲ್ಲಿ ಸೃಜನಶೀಲ-ಕ್ರೀಯಾಶೀಲ ಚಿಂತನಶೀಲತೆಯನ್ನು ಮೂಡಿಸಬೇಕೆಂಬ ಸಂಕಲ್ಪದೊಂದಿಗೆ ಹೊರಬಂದಿದೆ.

**೨.ವ್ಯಕ್ತಿ-ಅಭಿವ್ಯಕ್ತಿ**

ಇದು ಲಿಂಗರಾಜ ಮಹಾವಿದ್ಯಲಯದ ಕನ್ನಡ ವಿಭಾಗದ ಎರಡನೆಯ ಪ್ರಕಟಣೆ. ಇದು ಬಿ.ಎ. ಎರಡನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಅವಶ್ಯಕ ಕನ್ನಡದ ಪಠ್ಯವಾಗಿದೆ. ಭಾಷೆ ಸಾಹಿತ್ಯವನ್ನು ಅಧ್ಯಯನ ಮಾಡುತ್ತಿರುವ ಯುಜನಾಂಗವನ್ನು ಮಾನಸಿಕವಾಗಿ ಸದೃಡಗೊಳಿಸುವ ಉದ್ದೇಶ ಈ ಪಠ್ಯವಾಗಿದೆ.

**೩. ಹಕ್ಕಿ ಹಾರುತಿದೆ**

ಇದು ಕನ್ನಡ ವಿಭಾಗದ ಮೂರನೇ ಪ್ರಕಟಣೆಯಾಗಿದೆ. ಬಿ.ಎ. ಮೂರನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಅವಶ್ಯಕ ಕನ್ನಡ ಪಠ್ಯವಾಗಿದೆ. ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಕಾಲದ ಅನಂತ ಶಕ್ತಿಯ ವೇಗವನ್ನು ಈ ಕೃತಿಯ ಲೇಖನಗಳು ಕಥೆಗಳು ಹಿಡಿದಿಡಲು ಪ್ರಯತ್ನಿಸಿವೆ. ಓಡುತ್ತಿರುವ ಜಾಗತಿಕ ಬದುಕನ್ನು ಅರಿಯುತ್ತಾ ಬದುಕಲು ಕಲಿಯುವಂತೆ ಪ್ರೇರೇಪಿಸುವುದೇ ಈ ಪಠ್ಯದ ಉದ್ದೇಶವೆನಿಸಿದೆ.

**೪. ಅರಿವಿನ ಹಾದಿ**

ಇದು ಕನ್ನಡ ವಿಭಾಗದ ನಾಲ್ಕನೇಯ ಪ್ರಕಟಣೆ. ಇದು ಬಿ.ಎ. ನಾಲ್ಕನೇಯ ಸೆಮಿಸ್ಟರ್ ಅವಶ್ಯಕ ಕನ್ನಡ ಪಠ್ಯವಾಗಿದೆ. ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳಲಿಕ್ಕೆ ಜಗತ್ತನ್ನು ಸುತ್ತಿದರೆ ಉತ್ತರ ಸಿಗುವುದಿಲ್ಲ. ನಮ್ಮೊಳಗೆ ನಮ್ಮನ್ನು ಕಾಣುವಲ್ಲಿ ಬದುಕನ್ನು ಅರ್ಥಪೂರ್ಣಗೊಳಿಸಲು ಸಾಧ್ಯ. ಬಹಿರಂಗದ ಜಗತ್ತಿಗಿಂತ ಅಂತರಂಗದ ಜಗತ್ತು ದೊಡ್ಡದು. ಅದನ್ನು ಕಾಣುವ ಪ್ರಯತ್ನ ನಮ್ಮದಾಗಬೇಕು. ಬದುಕಿನ ನೆಮ್ಮದಿ, ಶಾಂತತೆ ಇರುವುದೆ ಅಲ್ಲಿ. ಬದುಕಿನ ಗದ್ದಲ-ಗೊಜುಗದಿಂದ ಹೊರಬಂದು ಒಳಗಣ್ಣಿನಿಂದ ಜಗತ್ತನ್ನು ನೋಡಬೇಕಾಗಿದೆ. ನಮ್ಮ ಈ ಒಳಮುಖದ ಅಂತರಂಗದ ಯಾತ್ರೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಉದ್ದೇಶದಿಂದ 'ಅರಿವಿನ ಹಾದಿ' ಎಂಬ ಶೀರ್ಷಿಕೆ ಹೊತ್ತು ನಿಂತಿದೆ.

**೫. ಕನ್ನಡ ಸಂವೇದನೆಗಳು :**

ಇದು ಕನ್ನಡ ವಿಭಾಗದ ಐದನೆಯ ಪ್ರಕಟಣೆಯಾಗಿದೆ. ಇದು ಬಿ.ಎ. ಐದನೆಯ ಸೆಮಿಸ್ಟರ್ ಕನ್ನಡ ಅವಶ್ಯಕ ಪಠ್ಯವಾಗಿದೆ. ಭಾಷೆ ಹರಿಯುವ ನದಿಯಿದ್ದಂತೆ. ಅದು ಜೀವ ಭಾಷೆಯ ಲಕ್ಷಣ. ಭಾಷೆ ಕೇವಲ ಲಿಖಿತ-ಮೌಖಿಕಕ್ಕಷ್ಟೇ ಸೀಮಿತವಾದುದಲ್ಲ. ಅದು ಸಂಸ್ಕೃತಿಯ ವಾಹಕವೂ ಹೌದು. ಭಾಷೆಯೊಂದು ಸಾಂಸ್ಕೃತಿಕ ನೆಲೆಗಟ್ಟಿನಿಂದ ನಿರಂತರವಾಗಿ ಶಕ್ತಿಯನ್ನು ಪಡೆಯುತ್ತದೆ. ಅಂತೆಯೆ ಭಾಷೆ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಭಾಷೆ, ನಾಡು, ಇತಿಹಾಸ ಸಂಸ್ಕೃತಿಗಳ ಅರಿವು, ಭಾಷಿಕನ ಮಾನಸಿಕ ಸದೃಢತೆಗೆ ಬೆನ್ನೆಲುಬುಗಳಾಗುತ್ತವೆ. ಇವುಗಳ ಅಧ್ಯಯನದಿಂದ ಕನ್ನಡ ಮನಸ್ಸು ರೂಪುಗೊಳ್ಳಲು ಪ್ರಾರಂಭವಾಗುತ್ತದೆ. ಇಂತಹ ಮನಸ್ಸುಗಳ ವ್ಯಕ್ತಿಗಳನ್ನಾಗಿ ರೂಪಿಸಬೇಕೆಂಬ ಉದ್ದೇಶದಿಂದ ಕನ್ನಡ ಸಂವೇದನೆಗಳು ಪಠ್ಯ ರಚನೆಗೊಂಡಿದೆ.

**೬. ಪ್ರಕೃತಿ**

ಇದು ಕನ್ನಡ ವಿಭಾಗದ ಆರನೆಯ ಪ್ರಕಟಣೆ. ಬಿ.ಎ. ಐದನೇಯ ಸೆಮಿಸ್ಟರ್ ಅವಶ್ಯಕ ಕನ್ನಡ. ಅನುವಾದ ಸಾಹಿತ್ಯ ಆಧುನಿಕ ಬದುಕಿನ ಅತ್ಯಂತ ಉಪಯುಕ್ತ ಶಾಖೆ. ಜಗತ್ತು ಈಗ ಅಂತರಜಾಲದ ಕೊಂಡಿಗಳ ಮೂಲಕ ಒಂದು 'ಗ್ಲೋಬಲ್ ವಿಲೇಜ್' ಆಗುತ್ತಿದೆ. ಮಾಹಿತಿ ತಂತ್ರಜ್ಞಾನ ಆಕರ್ಷಣೆ ಬೆಳೆಯುತ್ತಲೇ ಇದೆ. ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಅರಿಯುವ ಹಾದಿಯಲ್ಲಿ ಅನುವಾದ ಮೆಟ್ಟಿಲುಗಳು ಈ ಮೆಟ್ಟಿಲುಗಳು ಜ್ಞಾನ ದೇಗುಲಕ್ಕೆ ಒಂದು ಸಣ್ಣ ಪ್ರವೇಶಿಗಳು. ಅದಕ್ಕಾಗಿ ಈ ಗ್ರಂಥದ ಹೆಸರು 'ಪ್ರಕೃತಿ' ಎನ್ನುವ ಲೇಖನದೊಂದಿಗೆ, ಅನುವಾದದೊಂದಿಗೆ ಕೃಷಿ, ಜಲ, ಬರಹತ್ತುಹಲವು ಸಂಗತಿಗಳನ್ನು ಕಟ್ಟಿಕೊಡುವ ಈ ಪಠ್ಯೆ ಕಾಲದ ಸತ್ಯಗಳನ್ನು ಮನದಟ್ಟು ಮಾಡುತ್ತದೆ.

**೭. ಕನ್ನಡ ಸಾಹಿತ್ಯ ಪತ್ರಿಕೆ: ಒಂದು**

ಬಿ.ಕಾಂ., ಮೊದಲನೆಯ ಸೆಮಿಸ್ಟರ್ ಅವಶ್ಯಕ ಕನ್ನಡ. ವಿದ್ಯಾರ್ಥಿಗಳು ಪಠ್ಯವನ್ನು ಓದಿ ರಸಾನಂದ ಹೊಂದಬೇಕು. ಅನುಭವಿಸಿ ಬದುಕಬೇಕು ಎಂಬ ವಿಚಾರದೊಂದಿಗೆ ರಚಿತಗೊಂಡ ಬಿ.ಕಾಂ. ಪಠ್ಯ ಕಥೆ, ಕಾವ್ಯಗಳಿಂದ ವಿದ್ಯಾರ್ಥಿಗಳನ್ನು ರಂಜಿಸುತ್ತದೆ. ಸಾಮಾಜಿಕ, ಧಾರ್ಮಿಕ ಬದುಕನ್ನು ಹತ್ತಿರದಿಂದ ಕಟ್ಟಿಕೊಡುವ ಮೂಲಕ ಸಾಮಾಜಿಕ ಸಮಸ್ಯಗಳ ಮೇಲೆ ಕ್ಷ-ಕಿರಣ ಬೀರುತ್ತದೆ.

**೮. ಕನ್ನಡ ಸಾಹಿತ್ಯ ಪತ್ರಿಕೆ: ಎರಡು**

ಬಿ.ಕಾಂ. ಎರಡನೇಯ ಸೆಮಿಸ್ಟರ್ ಅವಶ್ಯಕ ಕನ್ನಡ ಪಠ್ಯವಾಗಿದೆ. ದಲಿತ ಬಂಡಾಯ-ನವ್ಯೋತ್ತರ ಘಟ್ಟದ ವಿಚಾರಗಳ ಮೇಲೆ ಬೆಳಕು ಚಲ್ಲುತ್ತಾ ಸಮಸ್ಯಗಳನ್ನು ಬಿಡಿಸಲು ಪ್ರಯತ್ನಿಸುತ್ತಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗುತ್ತವೆ.

ಇತ್ತೀಚೆಗೆ ಲಿಂಗರಾಜ ಕಾಲೇಜು ಕನ್ನಡ ವಿಭಾಗದಿಂದ 'ಲಿಂಗರಾಜವಾಣಿ' ಎಂಬ ನಾಲ್ಕು ಪುಟಗಳ ಪತ್ರಿಕೆಯು ಕನ್ನಡ ವಿಭಾಗದಿಂದ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಸಂಚಿಕೆಯಾಗಿ ೨೦೦೯ ರಲ್ಲಿ ಹುಟ್ಟಿಕೊಂಡಿತು. ೧೫ ದಿನಗಳಿಗೊಮ್ಮೆ ಸಂಪಾದನೆಗೊಂಡು ಹೊರಬರುತ್ತದೆ. ೨೦೧೦ ರಲ್ಲಿ ಮೊದಲ ವಿಶೇಷಾಂಕ, ೨೦೧೧ ರಲ್ಲಿ ಎರಡನೆಯ ವಿಶೇಷಾಂಕ ಹೊರಬಂದಿದೆ. ಇದಕ್ಕೆ ಬೆನ್ನೆಲುಬಾಗಿ ನಿಂತಂತಹ ಲಿಂಗರಾಜ ಮಹಾವಿದ್ಯಾಲಯದ ಅಧ್ಯಾಪಕ ಬಳಗದ ಕಾರ್ಯ ಶ್ಲಾಘನೀಯವಾಗಿದೆ.